**ಸಾಕ್ಷಿಗೆ ದಿನಾಂಕ:03-02-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 1 ನೇ ಪ್ರತಿವಾದಿ ಪರ ಶ್ರೀ.ಕೆ.ಎನ್.ವಿ ವಕೀಲರಿಂದ ::**

ಚಟ್ನಹಳ್ಳಿ ಗ್ರಾಮದಿಂದ ರಾಜನಹಳ್ಳಿ ಗ್ರಾಮಕ್ಕೆ ಸುಮಾರು 1 ಮೈಲಿ ದೂರ ಇರುತ್ತದೆ. ನಾನು ಈ ದಾವೆಯನ್ನು ರಾಜನಹಳ್ಳಿ ಗ್ರಾಮದ ಸರ್ವೇ ನಂ.25 ಕ್ಕೆ ಸಂಬಂಧಪಟ್ಟಂತೆ ಹೂಡಿರುತ್ತೇನೆ. ಈ ಹಿಂದೆ ನಾನು ಇದೇ ನ್ಯಾಯಾಲಯದಲ್ಲಿ ಓ ಎಸ್. ನಂ.336/2012 ರಂತೆ ಮೀನಾಕ್ಷಮ್ಮ, ಚಂದ್ರಶೇಖರ ಗಾಯತ್ರಮ್ಮ ರವರ ವಿರುದ್ದ ಶಾಶ್ವತ ಪ್ರತಿಬಂಧಕಾಜ್ಞೆ ಕೋಡಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯು ಬೆಂಗಳೂರಿನ ಒಂದು ನ್ಯಾಯಾಲಯಕ್ಕೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯು ಬೆಂಗಳೂರಿನ ಒಂದು ನ್ಯಾಯಾಲಯಕ್ಕೆ ವರ್ಗಾವಣೆಯಾದ ನಂತರ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯು ವಜಾ ಆಗಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಬಗರ್ ಹುಖುಮ್ ಸ್ವಾಧೀನದಲ್ಲಿ ಇದ್ದ ಪಕ್ಷದಲ್ಲಿ ಅದನ್ನು ತಹಶೀಲ್ದಾರು ನಿರ್ಣಹಿಸಬೇಕು ಹಾಗೂ ಒಂದು ವೇಳೆ ಅಂತಹ ಸ್ವಾಧೀನ ಅಕ್ರಮವಾದಲ್ಲಿ ನನ್ನನ್ನು ಬಿಡಿಸಬೇಕೆಂದು ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ದಾವ ಆಸ್ತಿಗೆ ಸಂಬಂಧಪಟ್ಟಂತೆ ನೀಡಿರುವ ಅರ್ಜಿಯು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಇರುವ ವಿಚಾರಗಳನ್ನು ನಾನು ಓದಿ ಅದು ಸರಿ ಇದ್ದ ಕಾರಣ ಹಾಜರುಪಡಿಸಿರುತ್ತೇನೆ ಎಂದರ ಸರಿ. ನಿಪಿ-2 ವರದಿಯಲ್ಲಿ ನಾನು ಹಿಂದೆ ಮಂಜೂರಾತಿ ಕೋರಿ ಸಲ್ಲಿಸಿದ್ದ ಅರ್ಜಿ ವಜಾ ಆಗಿರುತ್ತದೆ ಎಂದು ಬರೆದಿರುತ್ತದೆ ಎಂದರೆ ಸರಿಯಲ್ಲ. ನಿಪಿ-4 1991-92 ಸಾಲಿಗೆ ಸಂಬಂಧಪಟ್ಟ ದಾಖಲೆ ಆಗಿರುತ್ತದೆ ಎಂದರೆ ಸರಿ. ನಿಪಿ-4 ರಲ್ಲಿ ನಾನು ಸಲ್ಲಿಸಿರುವ ಅರ್ಜಿಯು ಸರ್ವೇ ನಂ.24 ಕ್ಕೆ ಸಂಬಂಧಪಟ್ಟದಕ್ಕೆ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-4 ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಸಮಯದಲ್ಲಿ ಸರ್ವೇ ನಂ 25 ಎಂದು ತಿದ್ದುಪಡಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ತಿದ್ದುಪಡಿ ಮಾಡಿರುವ ರೀತಿ ಕಂಡು ಬಂದರು ಸಹ ನಾನು ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿಯಲ್ಲಿ ನನ್ನ

ಹೆಸರು ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಗೆ ಸಂಬಂಧಪಟ್ಟ ದಾಖಲೆಯು ಈಗಾಲು ಸಹ ಹುಲ್ಲುಬನ್ನಿ ಎಂದು ಕಂಡು ಬರುತ್ತದೆ ಎಂದರೆ ಸರಿ. ನಿಪಿ-5 ದಾಖಲೆಯು ದಾವ ಆಸ್ತಿಯಲ್ಲಿ ಬೋರ್ ಕೊರೆಸಿರುವ ನೀಡಿರುವ ರಶೀದಿ ಆಗಿರುತ್ತದೆ. ನಿಪಿ-5 ದಾಖಲೆಯು ನೀಡಿರುವ ಯಾವ ಸರ್ವೇ ನಂಬರ್ ನಲ್ಲಿ ಬೋರ್ ಹಾಕಿರುತ್ತಾರೆ ಎಂದರೆ ಸರಿ. ನಿಪಿ-5 ದಾಖಲೆಯನ್ನು ಈ ದಾವೆಗೆ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ರಾಜನಹಳ್ಳಿ ಗ್ರಾಮದ ಸರ್ವೇ ನಂಬರ್.25 ರಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಂಜೂರಾತಿ ಕೋರಿ ನೀಡಿರುವ ಅರ್ಜಿಯು ನಾನು ದಾವ ಸ್ವತ್ತಿನಲ್ಲಿ ಸ್ವಾದೀನದಲ್ಲಿ ಇರುವುದಿಲ್ಲ ಎನ್ನುವ ಕಾರಣದಿಂದ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ದಾವ ಆಸ್ತಿಯು ಸರ್ಕಾರಿ ಹುಲ್ಲಬನ್ನಿ ಆಗಿರುತ್ತದೆ ಎಂದರೆ ಸಾಕ್ಷಿಯು ನಾನು ಸಾಗುವಳಿ ಮಾಡಿರುತ್ತಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ದಾವ ಆಸ್ತಿಯಲ್ಲಿ ಯಾವುದೇ ಸಾಗುವಳಿ ಮಾಡುತ್ತಿಲ್ಲ ಮತ್ತು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-7 ರಿಂದ 11 ಫೋಟೋಗಳು ದಾವ ಆಸ್ತಿಗೆ ಸಂಬಂಧಪಟ್ಟ ಫೋಟೋಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋಗಳಿಗೆ ಸಂಬಂದಪಟ್ಟ ನೆಗೆಟವ್ ಅಥವಾ ಸಿಡಿಯನ್ನು ನಾನು ನ್ಯಾಯಾಲಯಕ್ಕೆ ಹಾಜುರುಪಡಿಸಿರುವುದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸರ್ವೇ ನಂಬರ್.25 ಕ್ಕೆ ಸಂಬಂದಪಟ್ಟಂತೆ 4 ಎಕರೆ ಜಮೀನನ್ನು ಮಂಜೂರು ಮಾಡಿಕೊಡಲು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸರ್ವೇ ನಂಬರ್.25 ರಲ್ಲಿ 4 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದು ಹಾಗೂ ಅದನ್ನೇ ಸುಳ್ಳಾಗಿ ನಾನು ಸ್ವಾಧೀನದಲ್ಲಿ ಇರುವುದಾಗಿ ತೋರಿಸಿ ನಾನು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವರ ಜಮೀನಿಗೆ ಬೇಲಿ ಹಾಕಿ ಸಾಗುವಳಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ: ಶಿವಪುರ ಗಡಿ ಮತ್ತೊಂದು ಕಡೆ ಲೋಕನಾಯ್ಕರವರ ಜಮೀನು ಮತ್ತೆರಡು ಕಡೆ ರಸ್ತೆ ಇರುತ್ತದೆ. ನನಗೆ ದಿಕ್ಕುಗಳ ಬಗ್ಗೆ ಅಷ್ಟಾಗಿ ಮಾಹಿತಿ ಇರುವುದಿಲ್ಲ. ದಾವ ವಾದ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ.

**(ಪಾಟೀ ಸವಾಲಿಗೆ 1 ನೇ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: